# ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯ, ಉಜಿರೆ



ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯವನ್ನು 1989ರಲ್ಲಿ ಪೂಜ್ಯ ಡಾ। ಡಿ. ವೀರೇಂದ್ರ ಹೆಗ್ಗಡೆಯವರು ಉಜಿರೆಯಲ್ಲಿ ಸ್ಥಾಪಿಸಿದರು. ಈ ಮಹಾವಿದ್ಯಾಲಯವು ಏಷ್ಯಾದಲ್ಲೇ ಪ್ರಪ್ರಥಮ ಬಾರಿಗೆ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನದಲ್ಲಿ ಐದು ವರ್ಷಗಳ ಸ್ನಾತಕ ಪದವಿಯನ್ನು ನೀಡುತ್ತಿದ್ದು, ಶ್ರೀ ಧ. ಮಂ. ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ನಡೆಸಲ್ಪಡುತ್ತಿದೆ. ಮಹಾವಿದ್ಯಾಲಯವು ಎಂಟು ಎಕರೆಗಳಲ್ಲಿ ವಿಸ್ತರಿಸಲ್ಪಟ್ಟಿದ್ದು ಪ್ರಾಥಮಿಕ ಅಗತ್ಯ ವೈದ್ಯಕೀಯ ಹಾಗೂ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನಗಳ ವಿಷಯಗಳಲ್ಲಿ ಬೋಧನೆಗಾಗಿ ಬೇರೆ ಬೇರೆ ವಿಭಾಗಗಳು, ಯೋಗ ಮಂದಿರ, ಪ್ರಯೋಗಾಲಯಗಳು, ಶರೀರಶ್ಛೇದನ ಗೃಹ, ಸೆಮಿನಾರ್ ಹಾಲ್, ವಾಚನಾಲಯ (ಹೆಲಿನೆಟ್ ಡಿಜಿಟಲ್ ಲೈಬ್ರರಿ ಸರ್ವೀಸಸ್) ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ವಸತಿ ನಿಲಯಗಳು ಹಾಗೂ ಆಟದ ಮೈದಾನಗಳನ್ನು ಒಳಗೊಂಡಿದೆ.

ಪ್ರಕೃತಿ ಚಿಕಿತ್ಸೆಯು ಪಾರಂಪರಿಕ ಸರಳ ಚಿಕಿತ್ಸಾ ವಿಧಾನವಾಗಿದ್ದು ಪಂಚ ಭೌತಿಕ ತತ್ವಗಳ ಮೇಲೆ ಆಧಾರಿತವಾಗಿದೆ. ಔಷಧ ರಹಿತ ಚಿಕಿತ್ಸಾ ಪದ್ಧತಿಯಾದ ಪ್ರಕೃತಿ ಚಿಕಿತ್ಸೆಯಲ್ಲಿ ರೋಗದ ಮೂಲ ಕಾರಣವನ್ನು ಹುಡುಕಿ ಚಿಕಿತ್ಸೆಯನ್ನು ನೀಡಲಾಗುತ್ತದೆ. ರೋಗಗಳ ಮೂಲ ಕಾರಣವಾದ ವಿಷ ಪದಾರ್ಥಗಳು ("toxic matters") ಹೊರ ಹಾಕಲ್ಪಟ್ಟು, ರೋಗ ನಿರ್ಮೂಲನ ಸಾಧ್ಯವಾಗುತ್ತದೆ ಹಾಗೂ ದೇಹದ ಚೇತನ ಶಕ್ತಿಯು ಉದ್ದೀಪನಗೊಳ್ಳುತ್ತದೆ. ಆದ್ದರಿಂದಲೇ

" ಆರೋಗ್ಯವು ಪ್ರಕೃತಿಯ ಅಧೀನ, ವೈದ್ಯ ಸಹಾಯಕ ಮಾತ್ರ "

"चिकित्सा वैद्यायत्ता, प्रकृत्यभीनमारोग्यम"

ಯೋಗವು ಋಷಿ ಪರಂಪರೆಯಿಂದ ಬೋಧಿಸಲ್ಪಟ್ಟ ವಿಶ್ವ ಮಾನ್ಯವಾದ ಚಿಕಿತ್ಸಾ ವಿಧಾನ. ಪ್ರತಿಯೊಬ್ಬನೂ ತನ್ನ ಸಾಧನೆಯ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಹಾಗೂ ರೋಗವನ್ನು ತಡೆಗಟ್ಟುವ ವಿಧಾನವೇ ಯೋಗ ಚಿಕಿತ್ಸೆ. ದೇಹ ಹಾಗೂ ಮನಸ್ಸಿನ ನಿಯಂತ್ರಣದಿಂದ ಹಂತ ಹಂತವಾಗಿ ವ್ಯಕ್ತಿಯ ಪರಿಪೂರ್ಣತೆಯನ್ನು ಅಭಿವ್ಯಕ್ತಿಗೊಳಿಸಿ, ಆರೋಗ್ಯವನ್ನು ಸ್ಥಿರವಾಗಿಸುವುದೇ ಯೋಗ.

ನೇತ್ರಾವತಿ ನದಿ ತೀರದಲ್ಲಿ 200 ಹಾಸಿಗೆಗಳ ಶ್ರೀ ಧ. ಮಂ. ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆಯಲ್ಲಿ ವಿದ್ಯಾರ್ಥಿಗಳ ತರಬೇತಿ ಕೇಂದ್ರವನ್ನು ಹೊಂದಿದೆ. ಈ ಕೇಂದ್ರವು ಎಲ್ಲ ಪ್ರಕೃತಿ ಚಿಕಿತ್ಸಾ ವಿಧಾನಗಳೊಂದಿಗೆ ಪ್ರತ್ಯೇಕ ಮೂರು ಚಿಕಿತ್ಸಾ ಘಟಕಗಳನ್ನು ಹೊಂದಿದ್ದು, ಪ್ರತೀ ಘಟಕದಲ್ಲಿ ಸುಮಾರು 60 - 80 ರೋಗಿಗಳನ್ನು ಏಕಕಾಲದಲ್ಲಿ ಚಿಕಿತ್ಸೆಗೆ ಒಳಪಡಿಸುವ ಸೌಲಭ್ಯಗಳನ್ನು ಹೊಂದಿದೆ. ಜಲಚಿಕಿತ್ಸೆ, ಮಣ್ಣಿನ ಚಿಕಿತ್ಸೆ, ಮಾಲೀಶು ಚಿಕಿತ್ಸೆ, ಸೂಜಿ ಚಿಕಿತ್ಸೆ, ವರ್ಣ ಚಿಕಿತ್ಸೆ, ಫಿಸಿಯೋಥೆರಪಿ, ಉಪವಾಸ ಚಿಕಿತ್ಸೆ, ಯೋಗ ಚಿಕಿತ್ಸೆ ಮತ್ತು ಆಹಾರ ಚಿಕಿತ್ಸೆಗಳನ್ನು ನೀಡಲಾಗುತ್ತದೆ. ಈ ಕೇಂದ್ರದಲ್ಲಿ ಸಂಶೋಧನಾ ವಿಭಾಗವೂ ಕಾರ್ಯ ನಿರ್ವಹಿಸುತ್ತಿದೆ.

**ಪದವಿ :** ಬಿ. ಎನ್. ವೈ. ಎಸ್. (ಬ್ಯಾಚುಲರ್ ಆಫ್ ನ್ಯಾಚುರೋಪತಿ ಆ್ಯಂಡ್ ಯೋಗಿಕ್ ಸಾಯನ್ಸ್‌ಸ್) (4 ವರ್ಷಗಳು + 1 ವರ್ಷದ ಇಂಟರ್ನ್ ಶಿಪ್)

**ಮಾನ್ಯತೆ :** ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೆಂಗಳೂರು

**ಅರ್ಹತೆ :** ವಿಶ್ವವಿದ್ಯಾನಿಲಯ/ಬೋರ್ಡುಗಳಿಂದ ಮಾನ್ಯತೆ ಪಡೆದ ದ್ವಿತೀಯ ಪಿಯುಸಿ/ 12ನೇ ವರ್ಗ / ತತ್ಸಮಾನ ಕೋರ್ಸುಗಳಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಜೀವಶಾಸ್ತ್ರಗಳಲ್ಲಿ ಶೇಕಡಾ 45ರಷ್ಟು ಅಂಕ ಹೊಂದಿರಬೇಕು.

ಈ ಕೋರ್ಸಿನ ಬಗ್ಗೆ ಹೆಚ್ಚಿನ ವಿವರಗಳಿಗಾಗಿ :

ಪ್ರಾಂಶುಪಾಲರು

ಶ್ರೀ ಧ. ಮಂ. ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯ, ಉಜಿರೆ - 574 240

ಫೋನ್ : 08256 - 236188, 236488, 236225, Fax : 08256 - 236844 E - mail:sdmbnys@rediffmail.com